# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 358 |
| ಉತ್ತರಿಸುವ ದಿನಾಂಕ | 12-12-2018 |
| ಮಾನ್ಯ ಸದಸ್ಯರ ಹೆಸರು | ಡಾ॥ ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ಸಚಿವರು | ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಖಾಸಗಿ/ಸರ್ಕಾರಿ ಜಮೀನುಗಳಿಗೆ ಮಾರ್ಗದರ್ಶಿ ಬೆಲೆ ನಿಗದಿಗೊಳಿಸಲು ಅನುಸರಿಸುತ್ತಿರುವ ಮಾನದಂಡಗಳೇನು; (ಮಾಹಿತಿ ನೀಡುವುದು) | ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಉಪ ಬಂಧಗಳು ಹಾಗೂ ಕರ್ನಾಟಕ ಮುದ್ರಾಂಕ (ಕೇಂದ್ರ ಮೌಲ್ಯ ಮಾಪನ ಸಮಿತಿ ರಚನೆ, ಇತ್ಯಾದಿ)ನಿಯಮಗಳು, 2003ರನ್ವಯ ಮೌಲ್ಯ ಮಾಪನ ಉಪಸಮಿತಿಗಳು ಸ್ಥಿರಾಸ್ತಿಗಳ (ವಸತಿ, ವಾಣಿಜ್ಯ, ಕೈಗಾರಿಕೆ ನಿವೇಶನಗಳು, ಕೃಷಿ ಜಮೀನು ಹಾಗೂ ಇತರೆ) ಸರಾಸರಿ ಅಂದಾಜು ಮಾರ್ಗಸೂಚಿ ದರಗಳನ್ನು ಆಯಾ ಪ್ರದೇಶಕ್ಕೆ / ರಸ್ತೆ, ಬಡಾವಣೆ/ ವಾರ್ಡ್‌ವಾರು ಬರುವ ಗ್ರಾಮ ಹಾಗೂ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲಿರುವ ಎಲ್ಲಾ ರೀತಿಯ ಸ್ಥಿರಾಸ್ತಿಗಳಲ್ಲಿ ಆಗಿರುವ ದಸ್ತಾವೇಜುಗಳ ಮಾರಾಟ ಅಂಕಿಅಂಶಗಳ ಆಧಾರದ ಮೇಲೆ ಸರಾಸರಿ ಅಂದಾಜು ಮಾರ್ಗಸೂಚಿ ದರಗಳನ್ನು ಉಪಸಮಿತಿ ಸಭೆಯಲ್ಲಿ ಮಂಡಿಸಿ, ಸಾರ್ವಜನಿಕ ಆಕ್ಷೇಪಣೆ/ ಸಲಹೆಗಳನ್ನು ಆಹ್ವಾನಿಸಲು ತಾತ್ಕಾಲಿಕ ಅಧಿಸೂಚನೆ ಹೊರಡಿಸಿ, ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಅಂತಿಮವಾಗಿ ಕೇಂದ್ರ ಮೌಲ್ಯಮಾಪನ ಸಮಿತಿಯ ಮುಂದೆ ಮಂಡಿಸಿ, ಸದರಿ ಸಮಿತಿಯ ಅನುಮೋದನೆಯನ್ನು ಪಡೆದು ನಂತರ ಅಧಿಸೂಚನೆ ಹೊರಡಿಸಿ ಜಾರಿಗೊಳಿಸಲಾಗುತ್ತದೆ.<br>ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಮಾತ್ರ ಕೇಂದ್ರ ಮೌಲ್ಯ ಮಾಪನ ಸಮಿತಿಯಿಂದ ಪ್ರಾಥಮಿಕ ಹಾಗೂ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು. |
| ಆ | ಎಷ್ಟು ವರ್ಷಗಳಿಗೊಮ್ಮೆ ಜಮೀನುಗಳ ಮಾರ್ಗದರ್ಶಿ ಬೆಲೆ ನಿಗದಿ ಗೊಳಿಸಲಾಗುತ್ತಿದೆ; (ಆದೇಶದ ಪ್ರತಿ ಒದಗಿಸುವುದು) | ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಉಪ ಬಂಧಗಳು ಹಾಗೂ ಕರ್ನಾಟಕ ಮುದ್ರಾಂಕ (ಕೇಂದ್ರ ಮೌಲ್ಯ ಮಾಪನ ಸಮಿತಿ ರಚನೆ, ಇತ್ಯಾದಿ)ನಿಯಮಗಳು, 2003ರನ್ವಯ ಪ್ರತಿ ವರ್ಷ ಸ್ಥಿರಾಸ್ತಿಗಳ ಪರಿಷ್ಕೃತ ಸರಾಸರಿ ಅಂದಾಜು ಮಾರ್ಗಸೂಚಿ ದರಗಳನ್ನು ತಯಾರಿಸಿ ಜಾರಿಗೊಳಿಸಬೇಕಾಗಿರುತ್ತದೆ. |
| ಇ | ಮಹಾನಗರ ಪಾಲಿಕೆ ಹಾಗೂ ಬೆಂಗಳೂರು ನಗರ ಗ್ರಾಮಾಂತರ ಜಿಲ್ಲೆಗಳಲ್ಲಿ ಹಾಗೂ ರಾಷ್ಟ್ರೀಯ ಹೆದ್ದಾರಿಗಳಿಗೆ ಹೊಂದಿಕೊಂಡಿರುವ 'ಹಸಿರು ವಲಯ' ಜಮೀನುಗಳಿಗೆ ಕೋಟ್ಯಾಂತರ ರೂಗಳ ಬೆಲೆ ನಿಗದಿಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಕರ್ನಾಟಕ ಮುದ್ರಾಂಕ ಕಾಯ್ದೆ, 1957ರ ಹಾಗೂ ಅದರಡಿ ರಚಿಸಲಾದ ನಿಯಮಗಳಲ್ಲಿ ನಿಗದಿಪಡಿಸಿದ ರೀತ್ಯ ವಿವಿಧ ವರ್ಗದ ಜಮೀನುಗಳಿಗೆ ನಿಯಮಾನುಸಾರ ಮಾರ್ಗಸೂಚಿ ಬೆಲೆಯನ್ನು ಸಾರ್ವಜನಿಕರಿಂದ ಸ್ವೀಕೃತವಾಗಬಹುದಾದ ಆಕ್ಷೇಪಣೆಗಳನ್ನು ಪರಿಗಣಿಸಿ, ನಿಗದಿಗೊಳಿಸಲಾಗುತ್ತದೆ. |

ಸಂಖ್ಯೆ: ಕಂಇ 200 ಮುನೋಸ 2018

(ಆರ್.ವಿ.ದೇಶಪಾಂಡೆ)
ಕಂದಾಯ ಮತ್ತು ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು